SEVA BHARATHI
सेवा ही परमो धर्मः

ಸಂಪುಟ : 03
ಸಂಚಿಕೆ : 07

# ಸೇವಾಪಥ

ಸೇವಾಭಾರತಿ(ರಿ.), ಬೆಳ್ತಂಗಡಿ ತಾ॥ ಇದರ
(ದಕ್ಷಿಣ ಕನ್ನಡ ಜಿಲ್ಲಾ ಕನ್ನಡ ರಾಜ್ಯೋತ್ಸವ ಪ್ರಶಸ್ತಿ-2019 ಪುರಸ್ಕೃತ ಸಂಸ್ಥೆ)
ಮಾಸಿಕ e–ನ್ಯೂಸ್ ಲೆಟರ್ – ಸೆಪ್ಟೆಂಬರ್ 2022

ಪ್ರಧಾನ ಕಚೇರಿ : ಸೇವಾನಿಕೇತನ, ಕನ್ಯಾಡಿ–II, ಧರ್ಮಸ್ಥಳ ಅಂಚೆ, ಬೆಳ್ತಂಗಡಿ ತಾಲೂಕು, ದ.ಕ. – 574 216

## ನಾಲ್ಕನೇ ವರ್ಷದ ಸಂಭ್ರಮ ಮತ್ತು ಬೆನ್ನುಹುರಿ ಅಪಘಾತ ದಿನಾಚರಣೆ



## 3 ಜಿಲ್ಲೆಗಳಲ್ಲಿ ವಿಶ್ವ ಬೆನ್ನುಹುರಿ ಅಪಘಾತ ದಿನಾಚರಣೆ

- ರಕ್ತದಾನ ಶಿಬಿರ
- ಪತ್ರಿಕಾಗೋಷ್ಠಿ
- ಉಡುಪಿ ಭೇಟಿ
- ಆನ್‌ಲೈನ್ ಕಾರ್ಯಗಾರ

## ಸಮಾಜ ಸೇವಕರಿಗೆ ಸನ್ಮಾನ

**ಯಶೋಗಾಥೆ** ನೋಡಲು ಹೋದ ನೀರಿನ ಟ್ಯಾಂಕ್ ಬದುಕಿಗೆ ನೀರು ಕುಡಿಸಿತು!

ಹಾಸಿಗೆ ಬಿಟ್ಟು ವಾಕರ್ ಹಿಡಿದು ನಡೆದ ಹರೀಶ್ ಪ್ರಸಾದ್ ಕೊಪ್ಪಲ್‌ತೋಟ

Mob. : 99454 91241 | E-mail: sevabharathikanyady@gmail.com | Website: www.sevaabharathi.org

## ನಮ್ಮಿಂದಿಷ್ಟು

ಸೆಪ್ಟೆಂಬರ್ 5ನೇ ತಾರೀಖು ವಿಶ್ವ ಬೆನ್ನುಹುರಿ ಅಪಘಾತ ದಿನ. 4 ಜಿಲ್ಲೆಗಳಲ್ಲಿ ವಿವಿಧ ಸಂಘಟನೆಗಳ ಸಹಕಾರದಲ್ಲಿ ಆಚರಿಸುವ ಅವಕಾಶ ಸಿಕ್ಕಿರುವುದು ಮತ್ತು 2 ಕಡೆಗಳಲ್ಲಿ ಗಾಲಿಕುರ್ಚಿ ಜಾಥಾ ಮಾಡಿರುವುದು ದಿವ್ಯಾಂಗತೆಯ ಬಗ್ಗೆ ಅರಿವು ಮೂಡಿಸಲು ಸಾಧ್ಯವಾಯಿತು.

ನಮ್ಮೊಂದಿಗೆ ಸ್ವಯಂ ಸೇವಕರಾಗಿ ಸಮಯ ಕೊಡುವಂತಹ ಕಾರ್ಯಕರ್ತರು ಲಭ್ಯವಿದ್ದಲ್ಲಿ ನಮ್ಮ ಕೆಲಸ ಸುಲಭ ಸಾಧ್ಯವಾಗುತ್ತದೆ. ಈ ನಿಟ್ಟಿನಲ್ಲಿ ಪ್ರಯತ್ನವಿದೆ. ಉಡುಪಿ ಜಿಲ್ಲೆಯಲ್ಲಿ ಪ್ರಯತ್ನ ಪ್ರಾರಂಭಗೊಂಡಿದೆ. ಮುಂದಿನ ತಿಂಗಳು ಉಚಿತವಾಗಿ 2 ದಿನಗಳ ಆರೋಗ್ಯ ತಪಾಸಣೆ, ಜಾಗೃತಿ ಹಾಗೂ ತರಬೇತಿ ಶಿಬಿರವನ್ನು ಆಯೋಜಿಸಿಕೊಂಡಿರುತ್ತೇವೆ. ಆ ಸಂದರ್ಭದಲ್ಲಿ ಚಿತ್ರಣ ಸ್ಪಷ್ಟವಾಗುತ್ತದೆ.

ಪ್ರತಿ ತಿಂಗಳು ತನ್ನ ಆದಾಯದಲ್ಲಿ ಒಂದು ಭಾಗವನ್ನು ಬೆನ್ನುಹುರಿ ಅಪಘಾತಗೊಂಡವರ ಬದುಕಿಗಾಗಿ ದೇಣಿಗೆ ನೀಡುವಂತಹ ಮಹೋನ್ನತ ಸೇವೆಗಾಗಿ ಸೇರಿಕೊಳ್ಳಬೇಕು. ಈ ಸೇವಾನಿಧಿ ಯೋಜನೆಯು ಯಶಸ್ವಿಗೊಳ್ಳಲು ಪ್ರಯತ್ನವನ್ನು ಮಾಡಬೇಕಾಗಿದೆ.

ಈ ತಿಂಗಳ ವರದಿಯೂ ಒಂದು ಮಾದರಿ ಸೇವಾ ಕಾರ್ಯಕ್ಕೆ ಕೈಗನ್ನಡಿ.

ಇತೀ ತಮ್ಮವ
**ಕೆ. ವಿನಾಯಕ ರಾವ್**

## ನಮ್ಮ ವಿಳಾಸ

**ಪ್ರಧಾನ ಕಚೇರಿ :**
ಸೇವಾನಿಕೇತನ, ಕನ್ಯಾಡಿ–II
ಧರ್ಮಸ್ಥಳ ಗ್ರಾಮ, ಬೆಳ್ತಂಗಡಿ ತಾಲೂಕು – 574 216
ಮೊ.: 99454 91241

**ಜಿಲ್ಲಾ ಕಚೇರಿ :**
ಸೇವಾನಿಕೇತನ
ಶ್ರೀ ದುರ್ಗಾಪರಮೇಶ್ವರಿ ದೇವಸ್ಥಾನದ ಬಳಿ
ಹೆರ್ಗ, ಉಡುಪಿ ತಾಲೂಕು – 576 107
ಮೊ.: 9606044893

**ಸೇವಾ ಕೇಂದ್ರ :**
ಸೇವಾಧಾಮ
(ಬೆನ್ನುಹುರಿ ಅಪಘಾತಕ್ಕೊಳಗಾದವರಿಗಾಗಿ ಪುನಶ್ಚೇತನ ಕೇಂದ್ರ)
ಸೌತಡ್ಕ ಶ್ರೀ ಮಹಾಗಣಪತಿ ದೇವಸ್ಥಾನದ ಬಳಿ
ಕೊಕ್ಕಡ ಗ್ರಾಮ – 574 198
ಮೊ.: 94482 54888

## ನಮ್ಮ ತಂಡ

ಶ್ರೀ ಕೆ. ವಿನಾಯಕ ರಾವ್ – ಅಧ್ಯಕ್ಷರು
ಶ್ರೀ ಕೆ. ಯು. ಗಿರೀಶ್ ರಾವ್ – ಉಪಾಧ್ಯಕ್ಷರು
ಶ್ರೀಮತಿ ಸ್ವರ್ಣಗೌರಿ – ಕಾರ್ಯದರ್ಶಿ
ಶ್ರೀ ಬಿ. ಕೃಷ್ಣಪ್ಪ ಗುಡಿಗಾರ್ – ಖಜಾಂಚಿ
ಶ್ರೀ ಕೆ. ಬಾಲಕೃಷ್ಣ – ಟ್ರಸ್ಟಿ

## ಸಲಹಾ ಮಂಡಳಿ

ಶ್ರೀ CA ಗುಜ್ಜಾಡಿ ಪ್ರಭಾಕರ ನರಸಿಂಹ ನಾಯಕ್
ಶ್ರೀಮತಿ ಮನೋರಮ ಭಟ್
ಶ್ರೀ ಉದಯಶಂಕರ್
ಶ್ರೀ ಹರೀಶ್ ಟಿ. ಪಿ.
ಶ್ರೀ ಗೋಪಾಲ ಕೆ. ವಿ.
ಶ್ರೀ ವಿಷ್ಣು ಪ್ರಸಾದ್ ತೆಂಕಿಲ್ಲಾಯ
ಶ್ರೀಮತಿ ಜೊಯ್ಸ್ ಪಿರೇರಾ

## ಸಂಚಾಲಕರು

ಶ್ರೀ ಕೆ. ಪುರಂದರ ರಾವ್

## ನಿರ್ದೇಶಕರು

ಶ್ರೀ ರಾಯನ್ ಫೆರ್ನಾಂಡಿಸ್
ಶ್ರೀ ವಿಜಯ ಕೊಡವೂರು
ಡಾ. ಮುರಳೀಧರ ನಾಯಕ್

# ನಾಲ್ಕನೇ ವರ್ಷದ ಸಂಭ್ರಮ ಮತ್ತು ವಿಶ್ವ ಬೆನ್ನುಹುರಿ ಅಪಘಾತ ದಿನಾಚರಣೆ



**ಕೊಕ್ಕಡ** 05–09–2022 : ಸೇವಾಧಾಮದಲ್ಲಿ ನಾಲ್ಕನೇ ವರ್ಷದ ಸಂಭ್ರಮ ಹಾಗೂ ವಿಶ್ವ ಬೆನ್ನುಹುರಿ ಅಪಘಾತ ದಿನಾಚರಣೆಯನ್ನು ಆಚರಿಸಲಾಯಿತು. ದ.ಕ. ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಯಾದ ಶ್ರೀಯುತ ಗೋಪಾಲಕೃಷ್ಣರವರು ದೀಪ ಬೆಳಗಿಸುವುದರ ಮೂಲಕ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಸೇವಾಧಾಮ ಪುನಃಶ್ಚೇತನ ಕೇಂದ್ರದ ಸಂಸ್ಥಾಪಕರಾದ ಕೆ.ವಿನಾಯಕ ರಾವ್‌ರವರು ಪ್ರಾಸ್ತಾವಿಕ ನುಡಿಗಳನ್ನಾಡಿದರು. ಫಲಾನುಭವಿಗಳಿಗೆ 4–ಗಾಲಿ ಕುರ್ಚಿ, 1–ವಾಕರ್ ಮತ್ತು 6–ಮೆಡಿಕಲ್ ಕಿಟ್, 6–ಸೆಲ್ಫ್‌ಕೇರ್ ಕಿಟ್ ಅನ್ನು ನೀಡಲಾಯಿತು. ಸೇವಾಧಾಮಲ್ಲಿ ವೈದ್ಯಕೀಯ ಸೇವೆಗಾಗಿ ಕಕ್ಕಿಂಜೆಯ ಕೃಷ್ಣ ಹಾಸ್ಪಿಟಲ್‌ನೊಂದಿಗೆ ಒಡಂಬಡಿಕೆ ಪತ್ರವನ್ನು ವಿನಿಮಯ ಮಾಡಲಾಯಿತು. ಕಕ್ಕಿಂಜೆ ಡಾ. ಮುರಳಿ ಕೃಷ್ಣ ಇರ್ವತ್ರಾಯರನ್ನು "ಸೇವಾ ಶೇಷ್ಠ" ಬಿರುದಿನೊಂದಿಗೆ ಗೌರವಯುತವಾಗಿ ಸನ್ಮಾನಿಸಲಾಯಿತು. ಬೆನ್ನುಹುರಿ ಮುರಿತಕ್ಕೊಳಗಾದ ನಂತರವೂ ಸ್ವಾವಲಂಬಿ ಬದುಕಿಗಾಗಿ ಸ್ವ ಉದ್ಯೋಗವನ್ನು ಅರಸಿ ಪಿಯರ್ ಟ್ರೈನರ್ ಆಗಿ ಸೇವಾಧಾಮದಲ್ಲಿ ಕಾರ್ಯನಿರ್ವಹಿಸುತ್ತಿರುವ ಮೋಹನ್.ಕೆ ಅರಿಯಡ್ಕ ಇವರನ್ನು ಎಲ್ಲರಿಗೂ ಸ್ಫೂರ್ತಿಯಾಗುವ ನಿಟ್ಟಿನಲ್ಲಿ ಸನ್ಮಾನಿಸಲಾಯಿತು.

ಬೆಳ್ತಂಗಡಿಯ ರೋಟರಿ ಕ್ಲಬ್ ಅಧ್ಯಕ್ಷೆಯಾದ ಮನೋರಮ ಭಟ್; ಹರೀಶ್ ರಾವ್, ಅಧ್ಯಕ್ಷರು, ಶ್ರೀ ಮಹಾಗಣಪತಿ ದೇವಸ್ಥಾನ ವ್ಯವಸ್ಥಾಪನಾ ಸಮಿತಿ, ಸೌತಡ್ಕ; ಶ್ರೀ ಕೆ.ಕೃಷ್ಣ ಭಟ್; ಉದ್ಯಮಿಯಾದ ಪ್ರಭಾಕರ್ ಹೆಗ್ಡೆ ಮುಖ್ಯ ಅತಿಥಿಗಳಾಗಿ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು. ಮಾಜಿ ಸಿಬ್ಬಂದಿಗಳಾದ ಶ್ರೀ ಪಂಚೇಶ್, ಧನೇಂದ್ರ ಮತ್ತು ರಂಜನ್ ಕುಮಾರ್ ಇವರನ್ನು ಗೌರವಿಸಲಾಯಿತು. ಕೆ.ಪುರಂದರ ರಾವ್ ಅವರು ಅಧ್ಯಕ್ಷೀಯ ಭಾಷಣವನ್ನಾಡಿದರು. ಕಾರ್ಯಕಾರಿ ನಿರ್ದೇಶಕಿ ರೂಪಲಕ್ಷ್ಮಿ ಸ್ವಾಗತಿಸಿದರು. ಸಿಬ್ಬಂದಿಯಾದ ಪುಷ್ಪಲತಾ ನಿರೂಪಿಸಿ ಹಾಗೂ ಚರಣ್ ಎಂ. ಧನ್ಯವಾದವಿತ್ತರು. ನಂತರ ಸೇವಾಧಾಮದ ಸಿಬ್ಬಂದಿಗಳಿಂದ ಸಾಂಸ್ಕೃತಿಕ ಕಾರ್ಯಕ್ರಮ ಜರುಗಿತು.

## ಕೊಪ್ಪದಲ್ಲಿ ವಿಶ್ವ ಬೆನ್ನುಹುರಿ ಅಪಘಾತ ದಿನಾಚರಣೆ






**ಕೊಪ್ಪ** 21.09.2022 : ಚಿಕ್ಕಮಗಳೂರು ಜಿಲ್ಲೆಯ ಕೊಪ್ಪದ ಪುರಭವನದಲ್ಲಿ ವಿಶ್ವ ಬೆನ್ನುಹುರಿ ಅಪಘಾತ ದಿನಾಚರಣೆಯನ್ನು ಸೇವಾಭಾರತಿ ಮತ್ತು ರೋಟರಿ ಕ್ಲಬ್ ಕೊಪ್ಪ ಇದರ ಸಹಯೋಗದೊಂದಿಗೆ ಆಚರಿಸಲಾಯಿತು. ಶ್ರೀ ಸಿಂಧೆ ನಿಲೇಶ್, ಭಾ.ಅ.ಸೇ. ಉಪ ಅರಣ್ಯ ಸಂರಕ್ಷಣಾಧಿಕಾರಿಗಳು ಕೊಪ್ಪ ಕಾರ್ಯಕ್ರಮವನ್ನು ಉದ್ಘಾಟಿಸಿದರು. ಸೇವಾಭಾರತಿಯ ಅಧ್ಯಕ್ಷರಾದ ಶ್ರೀ ಕೆ.ವಿನಾಯಕ ರಾವ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಶಕಟಪುರ ಮಠದ ವ್ಯವಸ್ಥಾಪಕರಾದ ಶ್ರೀ ರಾಘವ, ರೋಟರಿ ಕ್ಲಬ್‌ನ ಅಧ್ಯಕ್ಷರಾದ ಎನ್.ಪಿ.ಸುಕೇಶ್, ರೋಟರಿ ಕ್ಲಬ್‌ನ ಕಾರ್ಯದರ್ಶಿಯಾದ ಡಾ. ಎಚ್.ಉದಯಶಂಕರ್, ಝೋನಲ್ ಲೆಫ್ಟಿನೆಂಟ್ ರಮೇಶ್, ರೋಟರಿ ಸದಸ್ಯರುಗಳಾದ ಶ್ರೀಮತಿ ರೇಖಾಉದಯ ಶಂಕರ್, ನಾಗರಾಜ್ ಪ್ರಸಾದ್, ರಾಘವೇಂದ್ರ ಭಟ್, ಸೇವಾ ಭಾರತೀಯ ಸಿಬ್ಬಂದಿಗಳಾದ ಆಶ್ರೀತ್ ಸಿ.ಪಿ., ಚರಣ್ ಎಂ., ಅಖಿಲೇಶ್ ಎ. ಉಪಸ್ಥಿತರಿದ್ದರು. ಈ ಸಂದರ್ಭದಲ್ಲಿ ದಿವ್ಯಾಂಗರಿಗೆ ಮೆಡಿಕಲ್ ಕಿಟ್ ವಿತರಣೆ ಮಾಡಲಾಯಿತು. ರೋಟರಿ ಕ್ಲಬ್‌ನ ಸದಸ್ಯರು ಮುಂದಿನ ದಿನಗಳಲ್ಲಿ ಬೆನ್ನುಹುರಿ ಅಪಘಾತಕ್ಕೊಳಗಾದವರ ಮನೆಗಳಿಗೆ ಭೇಟಿ ನೀಡಿ ಅವರಿಗೆ ನೀಡುವ ಸೇವೆಗಳ ಬಗ್ಗೆ ವಿಚಾರ ವಿನಿಮಯ ಮಾಡಲಾಯಿತು. ಕಾರ್ಯಕ್ರಮದ ನಂತರ ಕೊಪ್ಪ ಪುರಭವನದಿಂದ ಬಸ್‌ಸ್ಟ್ಯಾಂಡ್‌ವರೆಗೆ ಗಾಲಿಕುರ್ಚಿ ಜಾಥಾ ನಡೆಸಲಾಯಿತು. ಈ ಜಾಥಾದಲ್ಲಿ ಎಲ್ಲಾ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗಾರು, ರೋಟರಿ ಕ್ಲಬ್‌ನ ಸದಸ್ಯರು, ಕರ್ನಾಟಕ ಪಬ್ಲಿಕ್ ಸ್ಕೂಲ್‌ನ ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರು ಭಾಗಿಯಾಗಿದ್ದರು. ಜಾಥಾವನ್ನು ಉದ್ದೇಶಿಸಿ ಮಾತನಾಡಿದ ಡಾ. ಉದಯ ಶಂಕರ್ ಇವರು ಸೆಪ್ಟೆಂಬರ್ 5 ರಂದು ಶಿಕ್ಷಕರ ದಿನಾಚರಣೆಯನ್ನು ಹೇಗೆ ಆಚರಿಸಲಾಗುತ್ತದೊ ಅದೇ ದಿನ ವಿಶ್ವ ಬೆನ್ನುಹುರಿ ಅಪಘಾತಕ್ಕೊಳಗಾದವರ ದಿನವೆಂದು ಆಚರಿಸಲಾಗುತ್ತದೆ. ಇವರಿಗೂ ಸಹ ಬದುಕಲು ಹಕ್ಕು ಇದೆ. ಇವರನ್ನು ನಿರ್ಲಕ್ಷ್ಯ ಮಾಡದೆ ಸಂಘ ಸಂಸ್ಥೆಗಳು ಸಹಾಯ ಹಸ್ತ ನೀಡಬೇಕೆಂದು ಹೇಳಿದರು. ಶಕಟಪುರ ಮತ್ತು ರೋಟರಿಯು ಸೇವಾಧಾಮಕ್ಕೆ ಇದೇ ರೀತಿ ಸಹಕಾರ ನೀಡುವುದಾಗಿ ಭರವಸೆ ನೀಡಿದರು.

## ದಾನಿಗಳು

02–09–2022: "ಶ್ರೀ ಗಣೇಶ ಚತುರ್ಥಿ" ಸಂದರ್ಭದಲ್ಲಿ ಶ್ರಿ ಸಿದ್ಧಿವಿನಾಯಕ ದೇವಸ್ಥಾನ ಹಟ್ಟಿಯಂಗಡಿ ದೇವಸ್ಥಾನದ ಧರ್ಮದರ್ಶಿಗಳಾದ ವೇದಮೂರ್ತಿ ಹೆಚ್.ಬಾಲಚಂದ್ರ ಭಟ್ ಸೇವಾಭಾರತಿಯ ಕಾರ್ಯಚಟುವಟಿಕೆಯನ್ನು ಗುರುತಿಸಿ ಸಂಸ್ಥೆಗೆ ರೂ. 15000 ದೇಣಿಗೆಯಾಗಿ ನೀಡಿದರು. ಶ್ರಿ ಕೆ.ವಿನಾಯಕ ರಾವ್, ಶ್ರೀಮತಿ ಸ್ವರ್ಣಗೌರಿ, ರೂಪಲಕ್ಷ್ಮಿ ಮತ್ತು ಮನು ಅವರು ಚೆಕ್ ಸ್ವೀಕರಿಸಿದರು.

04–09–2022: ಕೆ.ಆರ್.ಸುಲೋಚನಾ (ಮೈಸೂರಿನ ಶ್ರೀಮತಿ ಮಂಜುಳಾ ಹರೀಶ್ ಅವರ ತಾಯಿ) 80ನೇ ಜನ್ಮದಿನದ ಪ್ರಯುಕ್ತ ರೂ. 2000 ಗಳನ್ನು ಸೇವಾಧಾಮಕ್ಕೆ ದೇಣಿಗೆಯಾಗಿ ನೀಡಿದರು.




05–09–2022 : ಶ್ರೀ ಪ್ರಶಾಂತ್ ಹಾವೇರಿ ಅರಣ್ಯ ರಕ್ಷಕ ಕೊಕ್ಕಡ ಇವರು ರೂ. 1000 ಗಳನ್ನು ದೇಣಿಗೆಯಾಗಿ ಸೇವಾಧಾಮದ ಕಾರ್ಯಚಟುವಟಿಕೆಗಳಿಗೆ ನೀಡಿದರು.

ಅಬುಧಾಬಿಯ ಸಿ.ಎ.ವೇಲೇರಿಯನ್ ಡಲ್ಮೆಡಾ ಅವರು ರೂ. 2500/– ಅನ್ನು ಸೇವಾಧಾಮದ ಚಟುವಟಿಕೆಗಳಿಗಾಗಿ ದೇಣಿಗೆಯಾಗಿ ನೀಡಿದ್ದಾರೆ.




**ಕನ್ಯಾಡಿ** 22.09.2022 :

ಶ್ರೀ ಕೆ.ಎಲ್. ಗೋಪಾಲಕೃಷ್ಣ ಇವರು ರೂ. 10,000/– ಹಾಗೂ ಇವರ ಮಗಳು ಶ್ರೀಮತಿ ಶ್ವೇತಾ ಜಿ. ಪೈ ಇವರು 15,000/–ದ ಚೆಕ್ ಅನ್ನು ದೇಣಿಗೆಯಾಗಿ ಸೇವಾಭಾರತಿಯ ಚಟುವಟಿಕೆಗಳಿಗಾಗಿ ಸೇವಾಧಾಮದ ಸಂಚಾಲಕರಾದ ಕೆ. ಪುರಂದರ ರಾವ್ ರವರ ಮೂಲಕ ದೇಣಿಗೆಯನ್ನು ನೀಡಿದರು. ಸಂಸ್ಥೆಯ ಅಧ್ಯಕ್ಷರಾದ ಕೆ. ವಿನಾಯಕ ರಾವ್‌ರವರು ಚೆಕ್ ಸ್ವೀಕರಿಸಿದರು. ಈ ಸಂದರ್ಭದಲ್ಲಿ ಸಿಬ್ಬಂದಿಗಳಾದ ಮೋಹನ್ ಎಸ್., ಚರಣ್ ಎಂ., ಆಶ್ರೀತ್ ಸಿ.ಪಿ., ಅಕ್ಷತಾ, ದೀಕ್ಷಾ ಉಪಸ್ಥಿತರಿದ್ದರು.

## ಸೆಪ್ಟೆಂಬರ್ ತಿಂಗಳಲ್ಲಿ ದೇಣಿಗೆ ನೀಡಿದ ಸಂಘ ಸಂಸ್ಥೆಗಳು

| | |
|---|---|
| ಅಸೋಸಿಯೇಷನ್ ಆಫ್ ಪೀಪಲ್ ವಿತ್ ಡಿಸೆಬಿಲಿಟಿ, ಬೆಂಗಳೂರು | 247500/– |
| ಶ್ರೀ ಸಿದ್ಧಿವಿನಾಯಕ ದೇವಸ್ಥಾನ ಹಟ್ಟಿಯಂಗಡಿ, ಕುಂದಾಪುರ | 15000/– |
| ಬಿಜೆಪಿ, ಉಡುಪಿ ನಗರ | 12500/– |

## ಸೇವಾನಿಧಿ ದಾನಿಗಳು

| | |
|---|---|
| ಶ್ರೀ ಮಧ್ವಮೂರ್ತಿ, ಉಡುಪಿ | 5000/– |
| ಶ್ರೀ ಜಿ. ವಿಜಯ ಗೌಡ, ಉಜಿರೆ | 2500/– |
| ಶ್ರೀ ವಲೇರಿಯನ್ ಡಲ್ಮೆಡಾ, ಮಂಗಳೂರು | 2500/– |
| ಶ್ರೀ ಕೆ. ಸೂರ್ಯನಾರಾಯಣ ರಾವ್, ದೊಂಡೋಲೆ | 2000/– |
| ಶ್ರೀ ಕೆ. ವಿನಾಯಕ ರಾವ್, ಕನ್ಯಾಡಿ | 2000/– |
| ಶ್ರೀಮತಿ ಛಾಯ ಸಿ.ಎಸ್, ಉಜಿರೆ | 500/– |
| ಡಾ. ರಾಮಕೃಷ್ಣ ಭಟ್ ಜಿ.ಎನ್., ಕನ್ಯಾಡಿ | 500/– |
| ಶ್ರೀ ಅದ್ವೈತ್ ಪೈ, ಕನ್ಯಾಡಿ | 500/– |
| ಶ್ರೀ ಕಾರ್ತಿಕ್ ಕೆ. ಧರ್ಮಸ್ಥಳ | 500/– |
| ಶ್ರೀಮತಿ ಬಬಿತ, ಕನ್ಯಾಡಿ | 500/– |
| ಶ್ರೀ ದೇವದಾಸ್ ಪ್ರಭು, ಕನ್ಯಾಡಿ | 500/– |
| ಶ್ರೀಮತಿ ಸ್ವರ್ಣ ಗೌರಿ, ಧರ್ಮಸ್ಥಳ | 500/– |
| ಶ್ರೀ ಈಶ್ವರ ಭಟ್, ಉಜಿರೆ | 500/– |
| ಶ್ರೀ ಮಧುಸೂದನ, ಉಜಿರೆ | 500/– |
| ಶ್ರೀ ರಜತ್ ಕುಮಾರ್ ಜೆ.ಡಿ., ವೇಣೂರು | 300/– |
| ಶ್ರೀ ಬಿ. ಪುರಂದರ, ಧರ್ಮಸ್ಥಳ | 200/– |

## ಮಹನೀಯ ದಾನಿಗಳು

| | |
|---|---|
| ಶ್ರೀಮತಿ ಶ್ವೇತಾ ಜಿ. ಪೈ, ಬೆಂಗಳೂರು | 15000/– |
| ಶ್ರೀಮತಿ ಮನೋರಮಾ ಭಟ್ ಜಿ.ವಿ, ಉಜಿರೆ | 10000/– |
| ಶ್ರೀ ಕೆ.ಎಲ್. ಗೋಪಾಲಕೃಷ್ಣ, ಬೆಂಗಳೂರು | 10000/– |
| ಶ್ರೀ ರಾಮ ಕಾರಂತ, ಉಜಿರೆ | 10000/– |
| ಶ್ರೀ ಹರೀಶ್ ಟಿ.ಪಿ., ಬೆಂಗಳೂರು | 5000/– |
| ಶ್ರೀ ವಿ. ಗೋಪಾಲಕೃಷ್ಣಯ್ಯ, ಬೆಂಗಳೂರು | 5000/– |
| ಶ್ರೀಮತಿ ಮಂಜುಳಾ ಹರೀಶ್, ಮೈಸೂರು | 2000/– |
| ಶ್ರೀ ಪ್ರಶಾಂತ್ ಪುತ್ತೂರು, ಬೆಂಗಳೂರು | 2000/– |
| ಸದಾಶಿವ ನಾಯ್ಕ್, ಕೊಕ್ಕಡ | 2000/– |
| ಶ್ರೀ ಶಿವರಾಮ ಧರ್ಮಸ್ಥಳ | 1000/– |
| ಶ್ರೀ ದತ್ತಾತ್ರೇಯ | 1000/– |
| ಪ್ರಶಾಂತ್ ಹಾವೇರಿ | 1000/– |
| ಡಿಒಎಸ್ಆರ್ ಇನ್ ಎಕೊನೊಮಿಕ್ಸ್, ತುಮಕೂರು | 1000/– |
| ಶ್ರೀ ಶಿವರಾವ್, ಧರ್ಮಸ್ಥಳ | 1000/– |
| ಶ್ರೀ ಹರೀಶ್ ರಾಜ್‌ಕುಮಾರ್ | 1000/– |

## ನಮ್ಮ ಭೇಟಿಗಳು

# ವಿಶ್ವ ಬೆನ್ನುಹುರಿ ಅಪಘಾತ ದಿನಾಚರಣೆ




**ಉಡುಪಿ: ಸೆಪ್ಟೆಂಬರ್ 08–09–2022** ಸೇವಾಭಾರತಿ (ರಿ) ಬೆಳ್ತಂಗಡಿ ಮತ್ತು ಕೊಡವೂರು ದಿವ್ಯಾಂಗರ ರಕ್ಷಣಾ ಸಮಿತಿಯ ಸಹಯೋಗದಲ್ಲಿ ಕೊಡವೂರು ವಿಶ್ವ ಬೆನ್ನುಹುರಿ ಅಪಘಾತದ ದಿನವನ್ನು ಉಡುಪಿಯಲ್ಲಿ ಆಚರಿಸಲಾಯಿತು. ಈ ಸಂದರ್ಭದಲ್ಲಿ ಡಾ. ನಾಗಭೂಷಣ ಉಡುಪ, ಡಿ.ಎಚ್.ಓ ಉಡುಪಿ ಮತ್ತು ಶ್ರೀ ಮಧ್ವಮೂರ್ತಿ, ಧಾನ್ಯಲಕ್ಷ್ಮೀ ರೈಸ್‌ಮಿಲ್, ಉಡುಪಿ ಇವರನ್ನು ಸನ್ಮಾನಿಸಲಾಯಿತು. ನಂತರ ಸಾರ್ವಜನಿಕರಿಗೆ ಅರಿವು ಮೂಡಿಸಲು ಗಾಲಿಕುರ್ಚಿಯ ರ್‍ಯಾಲಿಯನ್ನು ನಡೆಸಲಾಯಿತು. ಈ ಸಂದರ್ಭದಲ್ಲಿ ಸೇವಾಧಾಮದ ಎಲ್ಲಾ ಸಿಬ್ಬಂದಿಗಳು ಭಾಗವಹಿಸಿದ್ದರು.

## ವಿಶ್ವ ಬೆನ್ನುಹುರಿ ಅಪಘಾತ ದಿನಾಚರಣೆ




**ಶಿರಸಿ** 17–09–2022 : ಸೇವಾಭಾರತಿ (ರಿ) ಬೆಳ್ತಂಗಡಿ ಹಾಗೂ ರೋಟರಿ ಕ್ಲಬ್ ಶಿರಸಿಯ ಸಹಯೋಗದೊಂದಿಗೆ ವಿಶ್ವ ಬೆನ್ನುಹುರಿ ಅಪಘಾತ ದಿನಾಚರಣೆಯನ್ನು ನಯನ ಸಭಾಂಗಣ, ಗಣೇಶ ನೇತ್ರಾಲಯ ಶಿರಸಿಯಲ್ಲಿ ಆಚರಿಸಲಾಯಿತು. ರೋಟರಿ ಕ್ಲಬ್‌ನ 40 ಮಂದಿ ರೋಟೇರಿಯನ್ಸ್ ಹಾಗೂ ಇನ್ನರ್ ವೀಲ್ ಕ್ಲಬ್‌ನ ಸದಸ್ಯರು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದರು. ಸೇವಾಧಾಮದ ನಿರ್ದೇಶಕರಾದ ಶ್ರೀಯುತ ರಾಯನ್ ಫೆರ್ನಾಂಡೀಸ್ ಸಂಪನ್ಮೂಲ ವ್ಯಕ್ತಿಯಾಗಿ ಅಪಘಾತ ಮತ್ತು ಅದರ ನಿರ್ವಹಣೆ ವಿಷಯದ ಕುರಿತು ಅರಿವು ಮೂಡಿಸಿದರು. ಸೇವಾಭಾರತಿಯ ಕಾರ್ಯಕಾರಿ ನಿರ್ದೇಶಕಿ ಶ್ರೀಮತಿ ರೂಪಲಕ್ಷ್ಮಿ, ಉತ್ತರಕನ್ನಡ ಜಿಲ್ಲೆಯ ಕ್ಷೇತ್ರ ಸಂಯೋಜಕರಾದ ಪುರುಷೋತ್ತಮ್, ಸ್ವಯಂಸೇವಕರಾದ ಶ್ರೀ ಐವನ್ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು. ಕಾರ್ಯಕ್ರಮದಲ್ಲಿ ಶ್ರೀಕೃಷ್ಣ ಪೂಜಾರಿ ಹಾಗೂ ತಿಮ್ಮಗೌಡ ಇವರಿಗೆ ಗಾಲಿಕುರ್ಚಿ ವಿತರಣೆ ಮಾಡಲಾಯಿತು. ಈ ಕಾರ್ಯಕ್ರಮವನ್ನು ರೊ। ಮಹೇಶ್ ತೇಲಂಗ್ ಆಯೋಜಿಸಿದ್ದರು.

## – ಉಡುಪಿ ಭೇಟಿ –

**ಉಡುಪಿ :** ಉಡುಪಿ ಜಿಲ್ಲೆಯಲ್ಲಿ ಸೇವಾಭಾರತಿ ಬೆಳ್ತಂಗಡಿ ಮತ್ತು ದಿವ್ಯಾಂಗ ರಕ್ಷಣಾ ಸಮಿತಿ ಕೊಡವೂರು ಸಹಯೋಗದಲ್ಲಿ ವಿಶ್ವ ಬೆನ್ನುಹುರಿ ಅಪಘಾತ ದಿನಾಚರಣೆಯನ್ನು ಬೆಳಿಗ್ಗೆ 11.00ಕ್ಕೆ ಕಿವ್ವತ್ ಬೀಚ್ ಹಾಲಿಡೇ ಹೋಂ, ಮಲ್ಪೆಯಲ್ಲಿ ಹಮ್ಮಿಕೊಳ್ಳಲಾಯಿತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸೇವಾಭಾರತಿಯ ಅಧ್ಯಕ್ಷರು ಹಾಗೂ ಸೇವಾಧಾಮದ ಸಂಸ್ಥಾಪಕರಾದ ಶ್ರೀ ಕೆ.ವಿನಾಯಕ ರಾವ್ ರವರು ವಹಿಸಿದ್ದರು.

ಮುಖ್ಯ ಅತಿಥಿಗಳಾಗಿ ಉಡುಪಿ ಜಿಲ್ಲೆಯ ಆರೋಗ್ಯಾಧಿಕಾರಿಗಳಾದ ಡಾ. ನಾಗಭೂಷಣ ಉಡುಪ, ಪಂಚರತ್ನ ಪ್ಯಾರಡೈಸ್ ಹೋಟೆಲ್‌ನ ಮಾಲಕರಾದ ಶ್ರೀ ಸಂತೋಷ್ ಶೆಟ್ಟಿ, ಎಮರ್ಜೆನ್ಸಿ ಮೆಡಿಕಲ್ ಎಕ್ಸಿಕ್ಯೂಟಿವ್ ಆದ ಮಹಾಬಲ, ನಗರಸಭಾ ಸದಸ್ಯರಾದ ಶ್ರೀ ಕೆ.ವಿಜಯ ಕೊಡವೂರು, ಸ್ಪಂದನ ವಿಶೇಷ ಶಾಲೆಯ ಆಡಳಿತಾಧಿಕಾರಿಯಾದ ಜನಾರ್ಧನ, ಸೇವಾಧಾಮದ ನಿರ್ದೇಶಕರಾದ ಶ್ರೀ ರಾಯನ್ ಫೆರ್ನಾಂಡಿಸ್ ಉಪಸ್ಥಿತರಿದ್ದರು. ಗೌರವಾನ್ವಿತ ಜಿಲ್ಲಾ ಆರೋಗ್ಯಾಧಿಕಾರಿಗಳಾದ ಡಾ। ನಾಗಭೂಷಣ ಉಡುಪ ಇವರನ್ನು ಗೌರವಿಸಲಾಯಿತು. ಇದರೊಂದಿಗೆ ಬೆನ್ನುಹುರಿ ಮುರಿತಕ್ಕೊಳಗಾಗಿ ನೇರನುಡಿ ಸಂದರ್ಶನವನ್ನು ಆಯೋಜಿಸಲಾಗಿತ್ತು. ಸಂಜೆ 3 ಘಂಟೆಗೆ ಗಾಂಧಿ ಸರ್ಕಲ್‌ನಿಂದ ಟೌನ್ ಹಾಲ್‌ವರೆಗೆ ಜಾಥಾವನ್ನು ಏರ್ಪಡಿಸಲಾಗಿತ್ತು.

ಉಡುಪಿ ನಗರ ಸಭೆ ಅಧ್ಯಕ್ಷರಾದ ಶ್ರೀಮತಿ ಸುಮಿತ್ರಾ ನಾಯಕ್ ಇವರು ಜಾಥಾಕ್ಕೆ ಚಾಲನೆ ನೀಡಿದರು. ಸೇವಾಭಾರತಿಯ ಸಲಹಾ ಸಮಿತಿಯವರಾದ ಸಿ.ಎ.ಗುಜ್ಜಾಡಿ ನರಸಿಂಹ ಪ್ರಭಾಕರ ನಾಯಕ್ ಇವರು ಕಾರ್ಯಕ್ರಮಕ್ಕೆ ಶುಭ ಹಾರೈಸಿದರು. ಟೌನ್ ಹಾಲ್‌ನಲ್ಲಿ ಸಮಾರೋಪ ಸಮಾರಂಭ, ಸೇವಾಭಾರತಿಯ ಸಿಬ್ಬಂದಿಗಳ ಮೈಮ್ ಶೋದೊಂದಿಗೆ ಆರಂಭವಾಯಿತು. ಧಾನ್ಯಲಕ್ಷ್ಮಿ ರೈಸ್ ಮಿಲ್ಲಿನ ಮಾಲಕರಾದ ಶ್ರೀ ಮಧ್ವಮೂರ್ತಿ ಇವರನ್ನು ಗೌರವಿಸಲಾಯಿತು. ಈ ಕಾರ್ಯಕ್ರಮದಲ್ಲಿ ಹೆರ್ಗ ವ್ಯವಸಹಾಯ ಸೇವಾ ಸಹಕಾರಿ ಸಂಘದ ಅಧ್ಯಕ್ಷರಾದ ದಿನಕರ ಶೆಟ್ಟಿ, ಕೊಡವೂರು ವ್ಯವಸಾಯ ಸಹಕಾರಿ ಸಂಘದ ಅಧ್ಯಕ್ಷರಾದ ನಾರಾಯಣ ಬಲ್ಲಾಳ್, ಕೊಡವೂರು ಅಭಿವೃದ್ಧಿ ಸಮಿತಿಯ ಅಶೋಕ್ ಶೆಟ್ಟಿಗಾರ್, ನಾಗೇಂದ್ರ ಕುಮಾರ್ ಉಡುಪಿ, ನಗರಸಭಾ ಸದಸ್ಯರಾದ ಟಿ.ಜಿ.ಹೆಗ್ಡೆ ಉಪಸ್ಥಿತರಿದ್ದರು. ಕಾರ್ಯಕ್ರಮದಲ್ಲಿ 70 ಜನ ಭಾಗವಹಿಸಿದ್ದರು.

## ಪತ್ರಿಕಾಗೋಷ್ಠಿ






**ಕನ್ಯಾಡಿ** 02–09–2022 : ಸೇವಾಭಾರತಿ ಟ್ರಸ್ಟ್ (ರಿ) ಬೆಳ್ತಂಗಡಿ ಇದರ ಪ್ರಧಾನ ಕಚೇರಿಯಾದ ಸೇವಾನಿಕೇತನದಲ್ಲಿ ಪೂರ್ವಾಹ್ನ 10.30ಕ್ಕೆ ಪತ್ರಿಕಾಗೋಷ್ಠಿ ಏರ್ಪಡಿಸಲಾಗಿತ್ತು. ಸೆಪ್ಟೆಂಬರ್ 5 ವಿಶ್ವ ಬೆನ್ನುಹುರಿ ಅಪಘಾತಕ್ಕೊಳಗಾದವರ ದಿನಾಚರಣೆಯನ್ನು ಸೇವಾಧಾಮ ಸೌತಡ್ಕದ ಪುನಃಶ್ಚೇತನ ಕೇಂದ್ರದಲ್ಲಿ ಆಚರಿಸುವುದಾಗಿ ಸುದ್ದಿಗೋಷ್ಠಿಯಲ್ಲಿ ಸೇವಾಭಾರತಿಯ ಅಧ್ಯಕ್ಷರಾದ ಕೆ.ವಿನಾಯಕ ರಾವ್ ರವರು ಮಾತನಾಡಿದರು. 10 ಪತ್ರಿಕಾ ಪ್ರತಿನಿಧಿಗಳು ಭಾಗವಹಿಸಿದ್ದರು. ಸಂಸ್ಥೆಯ ಹಿರಿಯ ಪ್ರಬಂಧಕರಾದ ಚರಣ್ ಎಂ. ಹಾಗೂ ಹಣಕಾಸು ಪ್ರಬಂಧಕರಾದ ಮೋಹನ್ ಎಂ. ಉಪಸ್ಥಿತರಿದ್ದರು.

## ರಕ್ತದಾನ ಶಿಬಿರ



**ಹತ್ಯಡ್ಕ :** ಸೆಪ್ಟೆಂಬರ್ 11–09–2022 ಹತ್ಯಡ್ಕ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ (ನಿ) ಅರಸಿನಮಕ್ಕಿ, ಇಂಡಿಯನ್ ರೆಡ್‌ಕ್ರಾಸ್ ಸೊಸೈಟಿ, ಲೇಡಿ ಗೋಶನ್ ಆಸ್ಪತ್ರೆ ಮಂಗಳೂರು ಇದರ ವತಿಯಿಂದ ರೋಟರಿ ಕ್ಲಬ್ ಬೆಳ್ತಂಗಡಿ ಮತ್ತು ನಮ್ಮ ಸಂಸ್ಥೆ ಸೇವಾಭಾರತಿ ಇದರ ಸಹಕಾರದೊಂದಿಗೆ ಹತ್ಯಡ್ಕ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಸಭಾಂಗಣದಲ್ಲಿ ಬೆಳಿಗ್ಗೆ 9 ಗಂಟೆಯಿಂದ "ರಕ್ತದಾನ ಶಿಬಿರ" ನಡೆಯಿತು. ಶಿಬಿರದಿಂದ 111 ಯೂನಿಟ್ ರಕ್ತವನ್ನು ಸಂಗ್ರಹಿಸಲಾಯಿತು.

*I am not disabled I am differently abled*

## ಸಮಾಜ ಸೇವಕರಿಗೆ ಸನ್ಮಾನ



**ಬಂಟ್ವಾಳ** 11–09–2022 : ಸೇವ್ ಲೈಫ್ ಚಾರಿಟೇಬಲ್ ಟ್ರಸ್ಟ್ (ರಿ) ಇದರ ವತಿಯಿಂದ 3ನೇ ವರ್ಷದ ಸವಿನೆನಪಿಗಾಗಿ ಅಶಕ್ತ ಕುಟುಂಬಗಳಿಗೆ ಸಹಾಯ ನಿಧಿ ವಿತರಣೆ ಹಾಗೂ ಸಮಾಜ ಸೇವಕರಿಗೆ ಸನ್ಮಾನ ಸಮಾರಂಭದಲ್ಲಿ ನಮ್ಮ ಸಂಸ್ಥೆಯ ಅಧ್ಯಕ್ಷರಾದ ಶ್ರೀ ಕೆ.ವಿನಾಯಕ ರಾವ್ ಅವರನ್ನು ಗೌರವಿಸಲಾಯಿತು. ಈ ಕಾರ್ಯಕ್ರಮವು ಬಂಟ್ವಾಳದ ಶ್ರೀ ತಿರುಮಲ ವೆಂಕಟರಮಣ ದೇವಸ್ಥಾನದಲ್ಲಿ ನಡೆಯಿತು. ಒಟ್ಟು 125 ಮಂದಿಯನ್ನು ಸನ್ಮಾನಿಸಲಾಯಿತು ಹಾಗೂ ವಿವಿಧೋದ್ದೇಶಕ್ಕಾಗಿ ಧನಸಹಾಯ ವಿಸ್ತರಿಸಲಾಯಿತು.

## ಅಧ್ಯಕ್ಷರಿಗೆ ಸನ್ಮಾನ



**ಶಿಡ್ಲಘಟ್ಟ** 19–09–2022 : ಮೇಲೂರು ಗ್ರಾಮ ಪಂಚಾಯತ್ ಶಿಡ್ಲಘಟ್ಟ ತಾಲೂಕು, ಚಿಕ್ಕಬಳ್ಳಾಪುರ ಹಾಗೂ ವಿಶ್ವಬೆನ್ನುಹುರಿ ಅಪಘಾತಕ್ಕೊಳಗಾದವರ ನವಜೀವನ ಸೇವಾ ಸಂಘ (ರಿ) ಚಿಕ್ಕಬಳ್ಳಾಪುರ ಜಿಲ್ಲೆ ಮತ್ತು ಎ.ಪಿ.ಡಿ. ಸಂಸ್ಥೆ (ರಿ) ಬೆಂಗಳೂರು ಇದರ ಸಹಯೋಗದಲ್ಲಿ 75ನೇ ಸ್ವಾತಂತ್ರ್ಯ ಅಮೃತ ಮಹೋತ್ಸವದ ಸವಿನೆನಪಿಗಾಗಿ ಮತ್ತು ವಿಶ್ವ ಬೆನ್ನುಹುರಿ ಅಪಘಾತಕ್ಕೊಳಗಾದವರ ದಿನಾಚರಣೆಯ ಸಂದರ್ಭದಲ್ಲಿ ಸೇವಾಭಾರತಿಯ ಅಧ್ಯಕ್ಷರಾದ ಶ್ರೀ ಕೆ.ವಿನಾಯಕ ರಾವ್ ಇವರನ್ನು ಗೌರವಿಸಲಾಯಿತು.

## ಆನ್‌ಲೈನ್ ಕಾರ್ಯಗಾರ




12–09–2022 **"ಸೇವಾಸಂಗಮ"** ಎಂಬ ಶೀರ್ಷಿಕೆಯಡಿ ಬೆನ್ನುಮೂಳೆ ಮುರಿತಕ್ಕೊಳಗಾದ ವ್ಯಕ್ತಿಗಳಿಗೆ ಸಂಬಂಧಪಟ್ಟ ವಿವಿಧ ವಿಷಯಗಳ ಬಗ್ಗೆ ಸಂಪನ್ಮೂಲ ವ್ಯಕ್ತಿಗಳ ಮೂಲಕ ಅರಿವು ನೀಡುವ ಕಾರ್ಯಗಾರ ಆನ್‌ಲೈನ್ ಮೂಲಕ ಹಮ್ಮಿಕೊಳ್ಳಲಾಯಿತು.

**"ಬೆನ್ನುಹುರಿ ಅಪಘಾತದ ನಂತರ ಆರೈಕೆಯ ಮಹತ್ವ ಮತ್ತು ಆರೈಕೆದಾರರ ಪಾತ್ರ"** ಈ ಕಾರ್ಯಗಾರದಲ್ಲಿ ಎ.ಪಿ.ಡಿ.ಯ ನಿರ್ದೇಶಕರಾದ ಶ್ರೀ ಎ.ಎಲ್.ಜನಾರ್ದನ ಇವರು ಸಂಪನ್ಮೂಲ ವ್ಯಕ್ತಿಯಾಗಿದ್ದರು. ಒಟ್ಟು 62 ಜನ ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು.

## ನಮ್ಮ ಯೋಜನೆಗಳು

**ಆರೋಗ್ಯಮ್** : ರಕ್ತದಾನ ಶಿಬಿರಗಳ ಆಯೋಜನೆ ಮತ್ತು ಆ್ಯಂಬುಲೆನ್ಸ್ ಸೇವೆಗಳು.

**ಸಬಲಿನಿ** : ಮಹಿಳಾ ಸ್ವಾವಲಂಬನಕ್ಕಾಗಿ ವೃತ್ತಿ ತರಬೇತಿ.

**ಸೇವಾಧಾಮ** : ಬೆನ್ನುಹುರಿ ಅಪಘಾತಗೊಂಡವರಿಗಾಗಿ ಪುನಶ್ಚೇತನ ಕೇಂದ್ರ.

**ಸೇವಾಪಥ** : ಮಾಸಿಕ ಈ–ನ್ಯೂಸ್ ಲೆಟರ್ .

**ಸೇವಾ ಸಂಗಮ** : ಬೆನ್ನುಹುರಿ ಅಪಘಾತಗೊಂಡವರಿಗಾಗಿ ಆನ್‌ಲೈನ್ ಮೂಲಕ ಸಂಬಂಧಿತ ತಜ್ಞರಿಂದ ಮಾಹಿತಿ, ತರಬೇತಿ ಹಾಗೂ ಮಾರ್ಗದರ್ಶನ.

**ಆರೋಗ್ಯ ಬಿಂದು**: ಫಲಾನುಭವಿಗಳಿಗೆ ಕನಿಷ್ಠ ದರದಲ್ಲಿ ಮೆಡಿಕಲ್ ಕಿಟ್‌ಗಳು.

**ಆರೋಗ್ಯ ಸ್ಪರ್ಶ** : ಉಡುಪಿ ಜಿಲ್ಲೆಯಲ್ಲಿರುವ ಬೆನ್ನು ಹುರಿ ಅಪಘಾತ ಗೊಂಡವರಿಗಾಗಿ ಆರೋಗ್ಯ ಇಲಾಖೆಯ ಸಹಯೋಗದಲ್ಲಿ ಮನೆಮನೆಗಳಿಗೆ ಭೇಟಿ ನೀಡಿ ಆರೋಗ್ಯ ತಪಾಸಣೆ.

**ಸಾಮರ್ಥ್ಯಮ್** : ಬೆನ್ನುಹುರಿ ಅಪಘಾತಗೊಂಡವರಿಗಾಗಿ ವೃತ್ತಿ ತರಬೇತಿಗಳು.

**ಸೇವಾ ಚರಣ್** : ಬೆನ್ನುಹುರಿ ಅಪಘಾತಗೊಂಡವರಿಗಾಗಿ ಸಾಧನ ಸಲಕರಣೆಗಳ ಸಹಾಯ.

**ಸೇವಾನಿರ್ಮಲ**: ದಿವ್ಯಾಂಗ ಸ್ನೇಹಿ ಶೌಚಾಲಯ ಮತ್ತು ರ್‍ಯಾಂಪ್‌ಗಳಿಗೆ ಭಾಗಶಃ ಧನ ಸಹಾಯ.

**ಆರೋಗ್ಯ ಸಿಂಧು**: ಆರೋಗ್ಯ ತಪಾಸಣೆ ಮಾಹಿತಿ ಹಾಗೂ ತರಬೇತಿಗಳು.

### ತಾವು ಹೀಗೂ ನಮ್ಮ ಸಂಸ್ಥೆಯೊಂದಿಗೆ ಕೈಜೋಡಿಸಬಹುದಾಗಿದೆ

### ಸಂಸ್ಥೆಗೆ ದೇಣಿಗೆ ಮೂಲಕ ಸಹಕಾರ

| | |
|---|---|
| ರೂ. 2000/– | ನೀಡುವುದರ ಮೂಲಕ ಒಟ್ಟು ಫಲಾನುಭವಿಯ ಒಂದು ತಿಂಗಳ ಮೆಡಿಕಲ್ ಕಿಟ್‌ಗಳಿಗಾಗಿ ಸಹಕಾರ. |
| ರೂ. 6000/– | ನೀಡುವುದರ ಮೂಲಕ ಒಬ್ಬ ಫಲಾನುಭವಿಯ ಒಂದು ತಿಂಗಳ ಪುನಶ್ಚೇತನ ಚಿಕಿತ್ಸೆಗಾಗಿ ಸಹಕಾರ |
| ರೂ. 4500/– | ನೀಡುವುದರ ಮೂಲಕ ಫಲಾನುಭವಿಯ ಒಂದು ತಿಂಗಳ ಪುನಶ್ಚೇತನ ಚಿಕಿತ್ಸೆಯ ಸಂದರ್ಭ ಪೋಷಕರಿಗಾಗಿ ಸಹಕಾರ |
| ರೂ. 3000/– | ನೀಡುವುದರ ಮೂಲಕ ಸೇವಾಧಾಮದಲ್ಲಿ ಒಂದು ದಿನದ ಊಟೋಪಚಾರಕ್ಕೆ ಸಹಕಾರ |
| ರೂ. 10000/– | ನೀಡುವುದರ ಮೂಲಕ ಸಮುದಾಯ ಭೇಟಿಗಾಗಿ ಸಹಕಾರ |
| ರೂ. 15000/– | ನೀಡುವುದರ ಮೂಲಕ ಒಬ್ಬ ಫಲಾನುಭವಿಗಳಿಗೆ ಒಂದು ಗಾಲಿಕುರ್ಚಿಯ ಕೊಡುಗೆ |
| ರೂ. 10000/– | ನೀಡುವುದರ ಮೂಲಕ ಕೇಂದ್ರದಲ್ಲಿ ಹುಟ್ಟು ಹಬ್ಬದ ಆಚರಣೆ ಮಾಡುವುದು |

### Account Details

| | |
|---|---|
| A/c Holder | - M/s. Sevabharathi(R) |
| A/c No | - 120000400920 |
| IFS Code | - CNRB0010246 |
| Bank | - Canara Bank, Dharmasthala Branch |
| A/c Type | - Current Account |

| | |
|---|---|
| A/c Holder | - M/s. Sevabharathi(R) |
| A/c No | - 01682200072637 |
| IFS Code | - CNRB0010168 |
| Bank | - Canara Bank, Kokkada Branch |

**DONATE & JOIN US IN OUR MISSION**

# ನೋಡಲು ಹೋದ ನೀರಿನ ಟ್ಯಾಂಕ್ ಬದುಕಿಗೆ ನೀರು ಕುಡಿಸಿತು!

## ಹಾಸಿಗೆ ಬಿಟ್ಟು ವಾಕರ್ ಹಿಡಿದು ನಡೆದ ಹರೀಶ್ ಪ್ರಸಾದ್ ಕೊಪ್ಪಲ್‌ತೋಟರವರ ಯಶೋಗಾಥೆ



**ಸಮಯಪ್ರಜ್ಞೆ ಎಂಬುದು ಮನುಷ್ಯನ ಆದ್ಯ ಕರ್ತವ್ಯ ವಾಗಿದೆ. ಬಾಲ್ಯದಲ್ಲಿಯೇ ಬದುಕಿನ ಆಸೆ ಆಕಾಂಕ್ಷೆಗಳನ್ನು ಕಟ್ಟಿಕೊಂಡು ಜೀವನ ಸಾಗಿಸುತ್ತಿರುವ ಸಂದರ್ಭದಲ್ಲಿ ಎದುರಾದ ಪರಿಸ್ಥಿತಿಯು ಚಿಂತಾ ಜನಕವಾಗಿತ್ತು. ಯಾವ ರೀತಿಯಾಗಿ ಇವರು ತಮ್ಮ ಸಂಕಷ್ಟಗಳನ್ನು ಮೆಟ್ಟಿ ನಿಂತು ಹರೀಶ್ ಪ್ರಸಾದ್ ಕೊಪ್ಪಲ್ ತೋಟ ಸಾಧನೆಯ ದಾರಿಯೆಡೆಗೆ ಹೇಗೆ ಸಾಗಿದರು ಎಂಬುದರ ಯಶೋಗಾಥೆಯನ್ನು ನಿಮ್ಮ ಮುಂದಿಡುತ್ತಿದ್ದೇವೆ.**

ಮಲ್ಪೆ ಕೊಡವೂರು ಗ್ರಾಮದ ಕೊಪ್ಪಲ್ ತೋಟ ಸುಂದರ್ ಕೆ. ಮತ್ತು ರಾಧಾ ಇವರ ಇಬ್ಬರು ಮಕ್ಕಳಲ್ಲಿ ಎರಡನೇ ಮಗನಾಗಿ 24–11–1994ರಲ್ಲಿ ಜನಿಸಿದ ಹರೀಶ್ ಪ್ರಸಾದ್ ಫಸ್ಟ್ ಗ್ರೇಡ್ ಕಾಲೇಜ್ ತೆಂಕನಿಡಿಯೂರಿನಲ್ಲಿ ಬಿ.ಕಾಂ. ಪದವಿ ಶಿಕ್ಷಣವನ್ನು ಪೂರ್ಣಗೊಳಿಸಿದರು. ಮಲ್ಪೆ ಬಿಲ್ಲವ ಸಂಘದಲ್ಲಿ ಕೆಲಸಕ್ಕೆ ಸೇರಿಕೊಂಡರು. ಹೀಗೆ ಅವರ ಜೀವನವು ಮುನ್ನಡೆಯುತ್ತ ಸಾಗುವ ವೇಳೆ 27–1–2017 ರಂದು ತಾವು ಕೆಲಸ ಮಾಡುತ್ತಿರುವ ಬಿಲ್ಡಿಂಗ್‌ನ ನೀರಿನ ಟ್ಯಾಂಕ್‌ನಲ್ಲಿ ನೀರು ಬರುತ್ತಿಲ್ಲ ಎಂದು ನೋಡಲು ಹೋದ ಹರೀಶ್ ಪ್ರಸಾದ್ 10 ಅಡಿ ಎತ್ತರದಿಂದ ಕೆಳಕ್ಕೆ ಜಾರಿ ಬಿದ್ದು ಮಣಿಪಾಲದ ಕೆ.ಎಂ.ಸಿ ಆಸ್ಪತ್ರೆಗೆ ದಾಖಲಾಗುತ್ತಾರೆ. ವೈದ್ಯರು ಬೆನ್ನು ಹುರಿ ಅಪಘಾತಕ್ಕೊಳಗಾಗಿದ್ದಾರೆ ಎಂದರು. ಆಸ್ಪತ್ರೆಯ ಚಿಕಿತ್ಸೆಯ ನಂತರ ಮನೆಯಲ್ಲಿ ಆರು ತಿಂಗಳ ಕಾಲ ಮಲಗುವ ಪರಿಸ್ಥಿತಿ ಎದುರಾಗುತ್ತದೆ. ಆಸ್ಪತ್ರೆಯ ಮುಖಾಂತರ ಫಿಜಿಯೋಥೆರಪಿ ಮತ್ತು ಮನೆಯವರ ಸಹಾಯದಿಂದ ಬೆಡ್‌ನಿಂದ ವೀಲ್‌ಚೇರ್‌ಗೆ ಸ್ವತಃ ತಾವೇ ಕುಳಿತುಕೊಳ್ಳುವ ಅಭ್ಯಾಸವನ್ನು ಮಾಡಿದರು. ತಮ್ಮ ದಿನನಿತ್ಯದ ಕಾರ್ಯವೈಖರಿಯನ್ನು ತಾಯಿ, ತಂದೆ ಮತ್ತು ಅಣ್ಣನ ಸಹಾಯದಿಂದಾಗಿ ಮಾಡಿಕೊಳ್ಳುತ್ತಾ ಜೀವನ ಸಾಗುತ್ತಿತ್ತು. ಕೆಥೆಟರ್ ಅನ್ನು ಉಪಯೋಗಿಸುತ್ತಿದ್ದರು. ಆರ್ಥಿಕ ಪರಿಸ್ಥಿತಿ ತುಂಬಾ ಹದಗೆಟ್ಟಿತ್ತು. ಹಾಗಾಗಿ ಚಿಕ್ಕಪ್ಪನ ಮನೆಯಲ್ಲಿ ಇರಬೇಕಾದ ಪರಿಸ್ಥಿತಿ ಎದುರಾಯಿತು.

ವೀಲ್‌ಚೇರ್‌ನಿಂದ ವಾಕರ್ ಹಿಡಿದು ನಡೆಯುವ ಪ್ರಯತ್ನ ಮಾಡಿ ವಾಕರ್ ಹಿಡಿದು ನಡೆಯಲು ಕಲಿತರು. ಜಯ ಪೂಜಾರಿ ಕಲ್ಮಾಡಿ ಇವರಿಂದ ಸೇವಾಧಾಮ ಪುನಃಶ್ಚೇತನ ಕೇಂದ್ರ ಆರಂಭವಾಗುವ ಮಾಹಿತಿ ಪಡೆದರು. ಸೆಪ್ಟೆಂಬರ್ 16, 2018 ರಲ್ಲಿ ಸೇವಾಧಾಮ ಪುನಃಶ್ಚೇತನ ಕೇಂದ್ರ ಸೌತಡ್ಕಕ್ಕೆ ದಾಖಲಾಗುತ್ತಾರೆ. ವೀಲ್‌ಚೇರ್ ಅನ್ನು ಸರಿಯಾಗಿ ಹೇಗೆ ಉಪಯೋಗಿಸಬೇಕು ಎಂಬುದರ ಬಗ್ಗೆ ಸರಿಯಾದ ಮಾಹಿತಿ ಇವರಿಗೆ ಇರಲಿಲ್ಲ. ಸೇವಾಧಾಮ ಪುನಃಶ್ಚೇತನ ಕೇಂದ್ರದಲ್ಲಿ ಮೂರು ತಿಂಗಳ ತರಬೇತಿಯಿಂದಾಗಿ ಇವರು ವೀಲ್ ಚೇರ್ ಹೇಗೆ ಉಪಯೋಗಿಸಬೇಕು ಮತ್ತು ಒತ್ತಡ ಗಾಯ ಆಗದೇ ಇರುವ ಮಾಹಿತಿಯನ್ನು ಪಡೆದರು. ಹೀಗೆ ತರಬೇತಿಯನ್ನು ಪಡೆಯುತ್ತಾ ಕೆ.ವಿನಾಯಕ ರಾವ್‌ರವರು ಇವರಿಗೆ ಸ್ಫೂರ್ತಿಯಾದರು. ಪುನಃಶ್ಚೇತನ ಕೇಂದ್ರದಿಂದ ಮನೆಗೆ ಹಿಂತಿರುಗಿದ ಇವರು ತಾವು ಮೊದಲು ಕೆಲಸ ಮಾಡುತ್ತಿದ್ದ ಕಡೆಯಲ್ಲಿ ಮತ್ತೆ ಕೆಲಸಕ್ಕೆ ಸೇರುತ್ತಾರೆ. ನಂತರ ಕೌನ್ಸಿಲರ್ ವಿಜಯ ಕೊಡವೂರು ಇವರ ಮಾರ್ಗದರ್ಶನದಿಂದ ದಿವ್ಯಾಂಗ ರಕ್ಷಣಾ ಸಮಿತಿ ಆರಂಭಿಸಿ, ಹರೀಶ್ ಪ್ರಸಾದ್ ಪ್ರಮುಖವಾಗಿ ಕಾರ್ಯ ನಿರ್ವಹಿಸುತ್ತಾರೆ. ಪ್ರಸ್ತುತ ಕೊಡವೂರು ವಾರ್ಡಿನ 15 ಜನ ದಿವ್ಯಾಂಗರಿಗೆ ಪ್ರತಿ ತಿಂಗಳು ಅಕ್ಕಿ ವಿತರಣೆ, ವೈದ್ಯಕೀಯ ಸೇವೆ, ಕ್ಯಾನ್ಸರ್ ರೋಗಿಗಳಿಗೆ ಸಹಾಯ ಮಾಡುವಂಥದ್ದು, ಮನೆ ಕಟ್ಟಲು ಸಹಾಯವನ್ನು ಸಂಸ್ಥೆಯು ಮಾಡುತ್ತಿದೆ. ಅಲ್ಲದೆ ಉಡುಪಿ ಜಿಲ್ಲೆಯಿಂದ ಸೇವಾಧಾಮ ಪುನಃಶ್ಚೇತನ ಕೇಂದ್ರಕ್ಕೆ ಬರುವ ಬೆನ್ನುಹುರಿ ಅಪಘಾತಕ್ಕೊಳಗಾದವರಿಗೆ ದಿವ್ಯಾಂಗ ರಕ್ಷಣಾ ಸಮಿತಿ ಕೊಡವೂರು ಇದರ ವತಿಯಿಂದ ಸಹಾಯಧನ ನೀಡುವ ವ್ಯವಸ್ಥೆಯು ಲಭ್ಯವಿದೆ. ಹೀಗೆ ಹರೀಶ್ ಪ್ರಸಾದ್ ಕೊಪ್ಪಲ್‌ತೋಟ ಇವರ ಯಶೋಗಾಥೆಯು ಉಳಿದವರಿಗೆ ಮಾದರಿಯಾಗಲಿ.